**ವ್ಯಾಖ್ಯಾನ**

# <u>ದೇವ ಬಂದ ನಮ್ಮ ಸ್ವಾಮಿ ಬಂದನೋ</u>

**Ref.**: Dasara Maatina Sobagu, by Dr. Vijayendra R Desai, page No. 76.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ದೇವ ಬಂದ ನಮ್ಮ ಸ್ವಾಮಿ ಬಂದನೋ
ದೇವರ ದೇವ ಶಿಖಾಮಣಿ ಬಂದನೋ || ಪ ||

ಉರಗ ಶಯನ ಬಂದ ಗರುಡ ಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದ ||

ಮಂದರಧರ ಬಂದ ಮಾಮನೋಹರ ಬಂದ
ಬೃಂದಾವನಪತಿ ಗೋವಿಂದ ಬಂದನೋ ||

ಪೂತನಿ ಸಂಹರಣ ಬಂದ ಪುರುಹೂತ ವಂದ್ಯ ಬಂದ
ಮಾತುಳನ ಮಡುಹಿದ ಗೋವಿಂದ ಬಂದ ||

ನಕ್ರಹರನು ಬಂದ ಚಕ್ರಧರನು ಬಂದ
ಅಕ್ರೂರಗೊಲಿದ ತ್ರಿವಿಕ್ರಮನು ಬಂದನೋ ||

ಪಕ್ಷಿವಾಹನ ಬಂದ ಲಕ್ಷ್ಮಿ ರಮಣ ಬಂದ
ಅಕ್ಷಯ ಫಲದ ಲಕ್ಷ್ಮಣಾಗ್ರಜ ಬಂದ ||

ನಿಗಮಗೋಚರ ಬಂದ ನಿತ್ಯ ತೃಪ್ತನು ಬಂದ
ನಗೆಮುಖ ಪುರಂದರ ವಿಠಲ ಬಂದನೋ ||

**ದೇವ ಬಂದ ನಮ್ಮ ಸ್ವಾಮಿ ಬಂದನೋ**
**ದೇವರ ದೇವ ಶಿಖಾಮಣಿ ಬಂದನೋ || ಪ ||**

ಪ್ರಸಿದ್ಧ ದೇವರ ನಾಮ. ದಾಸವರೇಣ್ಯರ ಮಾತು. ದೇವರನ್ನು ಕಂಡವರು ಪುರುಂದರ ದಾಸರು.

ಹೇಳುತ್ತಾರೆ - ದೇವ ಬಂದಾ. ದೇವ - ದ್ಯುಯತೆ, ಕ್ರೀಡಾತ್ಮಕ, ವ - ಬಲಾತ್ಮಕ, ಜ್ಞಾನಾರ್ಥಕ.

ಬ್ರಹ್ಮಾಂಡ ನಿಯಮನ ಪರಮಾತ್ಮನಿಗೆ ಅನಾಯಾಸದ ಕ್ರೀಡೆ. ಲೀಲೆ.

ತಾತ್ಪರ್ಯ ಸರ್ವಸಮರ್ಥ, ಜ್ಞಾನಾಂದಮಯನೇ ಬಂದಾ.

ಜ್ಞಾನಾಂದಮಯನೇ ಬಂದ ಎಂದು ಏಕೆ?

ಬೆಳಕು ಬಂದರೆ ಕತ್ತಲು ಮಾಯ. ಜ್ಞಾನದ ಆಗಮನ. ಅಜ್ಞಾನದ ನಿರ್ಗಮನ. ಜ್ಞಾನ ಮೋಕ್ಷದ ಸಾಧನ. ಮೋಕ್ಷ ಸರ್ವರಿಗೆ ಪ್ರಿಯ. ಅದಕ್ಕಾಗಿ ದೇವ ಬಂದ. ಮೋಕ್ಷಪ್ರದನಾದ ಪರಮಾತ್ಮ ಬಂದ.

ಮತ್ತೆ ಈ ದೇವ ಯಾರು?

ಸ್ವಾಮಿ ಬಂದಾ - ಈತ ನಮ್ಮೆಲ್ಲರ ಸ್ವಾಮಿ. ನಿಮ್ಮೆಲ್ಲರ ಸ್ವಾಮಿ. ಜಗದ ಸ್ವಾಮಿ.

ದೇವರ ದೇವ ಬಂದಾ – ಇದುತಾರತಮ್ಯ ಸೂಚಕ ಸಕಲದೇವತೆಗಳಿಗೆ ದೇವ ಹೆದ್ದೈವ ಶ್ರೀಹರಿ ಬಂದಾ.

ದೇವರದೇವ ಶಿಖಾಮಣಿ ಬಂದಾನೋ —

ಗರುಡ, ಶೇಷ, ರುದ್ರ, ಇಂದ್ರಾದಿಗಳು ದೇವರು. ಈ ದೇವರ ದೇವ - ಅವರ ಮೇಲಿನವ ವಾಯು, ಬ್ರಹ್ಮಾದಿಗಳು. ಇವರ ಮೇಲೆ ಶಿಖಾಮಣಿ. ಇವರೆಲ್ಲರಿಗೆ ಶಿಖಾಮಣಿ - ನಾಯಕ, ಅಧಿಪತಿ - ದೇವರದೇವ ಶಿಖಾ ಮಣಿ - ಸರ್ವೋತ್ತಮ ನಾರಾಯಣ ಬಂದಾನೋ.

ದಾಸರು ಹೇಳುತ್ತಾರೆ – ಈಗ ಬಂದದ್ದು ಆನಂದಮಯ. ಸರ್ವಸಮರ್ಥ, ಸರ್ವಜ್ಞ, ಸರ್ವೇಶ. ಸರ್ವೋತ್ತಮನಾದ ಶ್ರೀ ಮನ್ನಾರಾಯಣ.

ದಾಸರ ಅನುಸಂಧಾನ ನೋಡಿ. ಉಳಿದ ದೇವತೆಗಳನ್ನು ದಾಸರು ಹರಿಯ ಪರಿವಾರತಯಾ ಉಪಾಸಿಸುತ್ತಾರೆ. ಈಗ ದಾಸರಿಗೆ ದರ್ಶನ ಕೊಡುತ್ತಿರುವ ಶ್ರೀಹರಿ, ಪರಿವಾರ ಸಹಿತ ದರ್ಶನ ಕೊಡುತ್ತಿದ್ದಾನೆ.

**ಉರಗ ಶಯನ ಬಂದ ಗರುಡ ಗಮನ ಬಂದ**
**ನರಗೊಲಿದವ ಬಂದ ನಾರಾಯಣ ಬಂದಾ || 1 ||**

ಉರಗ ಶಯನ ಬಂದ -- ಶೇಷ ದೇವರೇ ವೈಭವದ ಮಂಚ, ಶಯನ ವಿಷ್ಣುವಿಗೆ.
ಶೇಷ ಜೀವಾಭಿಮಾನಿ. ಅಂಥವ ಹರಿಗೆ ಹಾಸಿಗೆ. ಅರ್ಥ ಹರಿ ಸರ್ವಜೀವ ನಿಯಾಮಕ.

ಗರುಡ ಗಮನ ಬಂದ -- ಮನೋವೇಗದ ಗರುಡನೇ ವಿಷ್ಣುವಿನ ವಾಹನ. ಗರುಡ ಕಾಲಾಭಿಮಾನಿ. ಈತ ಆತನ ವಾಹನ.

**ಅರ್ಥ ಹರಿ ಕಾಲ ನಾಮಕ. ಕಾಲ ನಿಯಾಮಕ,ಕಾಲ ಪ್ರವರ್ತಕ, ಕಾಲಜ್ಞ**

ನರಗೊಲಿದವ ಬಂದ -- ಅರ್ಜುನ ನರಾಂಶ. ಅರ್ಜುನನಿಗೆ ಒಲಿದವ ಕೃಷ್ಣ ಬಂದಾ. ಅರ್ಜುನ ಇಂದ್ರಾವತಾರ. ಇಂದ್ರನಿಗೆ ಅನುಗ್ರಹಿಸಿದವ ನಾರಾಯಣ ಬಂದ.

ಗರುಡ, ಶೇಷ, ರುದ್ರ, ಇಂದ್ರ ಇಲ್ಲಿಯೂ ತಾರತಮ್ಯ ಸೂಚಕ. ಸರ್ವೋತ್ತಮ ನಾರಾಯಣ. ಇಂಥ ನಾರಾಯಣ ಬಂದಾ.

ಸರಿ, ನಾರಾಯಣ ಎಲ್ಲಿಂದ ಬಂದ? ಎಲ್ಲಿಗೆ ಬಂದ?

ದಾಸರು ಭಕ್ತ ಶ್ರೇಷ್ಠರು. ಪರಮಾತ್ಮ ಅವರ ಉಪಾಸನೆಗೆ ಒಲಿದ. ವೈಕುಂಠದಿಂದ ಇಳಿದ. ದಾಸರ ಹೃದಯ ಮಂಟಪಕೆ ಬಂದಾ.

ಹೇಗೆ ಬಂದಾ? ಏನು ಮಹಿಮೆ?
ಹೇಳುತ್ತ ಸ್ತುತಿಸುತ್ತಿದ್ದಾರೆ ದಾಸರು.

**ಮಂದರಧರ ಬಂದ ಮಾಮನೋಹರ ಬಂದ|**
**ಬೃಂದಾವನಪತಿ ಗೋವಿಂದ ಬಂದಾನೋ || 2 ||**

ರಮಾರಮಣ ಬಂದಾ. ಮಂದರಧರ ಬಂದಾ = ಕೂರ್ಮಾತಾರ ತಾಳಿದ. ಮಂದರ ಪರ್ವತ ಧರಿಸಿದ. ಸಮುದ್ರ ಮಂಥನ ಮಾಡಿಸಿದ. ಆ ಕೂರ್ಮಾವತಾರ ತಾಳಿದ ಪ್ರಭುವೇ ಈ ನಾರಾಯಣ. ಈಗ ಬಂದವ.

ಸೂಚ್ಯವಾಗಿ ದಶಾವತಾರಗಳ ಮಹಿಮೆ ಸ್ಮರಿಸುತ್ತಾರೆ ದಾಸರು.

ಬೃಂದಾವನ ಪತಿ ಗೋವಿಂದ ಬಂದಾನೋ = ಬೃಂದಾವನಪತಿ ಶ್ರೀ ಕೃಷ್ಣ. ಆತನೇ ಗೋವಿಂದ. ಆತನೇ ಬಂದಾ. ಗೋವಿಂದ ಎನ್ನುವದರೊಂದಿಗೆ ಕೃಷ್ಣನ ಮಹಾತ್ಮೆ ಸ್ಮರಿಸುತ್ತಾರೆ.

ಕೋಪಗೊಂಡ ಇಂದ್ರ ಸಂವರ್ತಕ ಮಳೆ ಸುರಿಸಿದ. ಕೃಷ್ಣ ಗೋವರ್ಧನ ಗಿರಿ ಎತ್ತಿ ಹಿಡಿದ. ಎಲ್ಲರನ್ನು ರಕ್ಷಿಸಿದ. ಇಂದ್ರ ಸೋತ. ಸಕಲ ದೇವತೆಗಳೊಂದಿಗೆ ಬಂದ. ಕೃಷ್ಣನ ಪಾದಕ್ಕೆ ನಮಸ್ಕರಿಸಿದ. ಗೋವುಗಳನ್ನು ಗೋಕುಲವನ್ನೂ ಸಂರಕ್ಷಿಸಿದ ಕೃಷ್ಣನನ್ನು ಗೋವಿಂದ ಎಂದು ಸ್ತುತಿಸಿದರು.

ಈ ಮಹಿಮೆಯನ್ನೂ ದಾಸರು ನೆನಪಿಸುತ್ತಾರೆ.

**ಪೂತನಿ ಸಂಹರಣ ಬಂದ ಪುರುಹೂತ ವಂದ್ಯ ಬಂದ**
**ಮಾತುಳನ ಮಡುಹಿದ ಗೋವಿಂದ ಬಂದ || 3 ||**

ಬಾಲಕೃಷ್ಣ ಲೀಲೆಗಳನ್ನು ಕೊಂಡಾಡುತ್ತಾರೆ.

ವಿಷ ಕುಡಿಸಲು ಬಂದ ಪೂತನಿಯ ಕೊಂದ. ದುಷ್ಟ ಸೋದರಮಾವನಾದ ಕಂಸನ ಸಂಹರಿಸಿದ. ದೈತ್ಯರ ರಾಜ ಕಂಸ. ಪೂತನಿ, ಶಕಟಾಸುರ, ಧೇನುಕಾಸುರ, ತೃಣಾವರ್ತ ಮೊದಲಾದವರೆಲ್ಲ ಆತನ ಸೈನಿಕರು. ಸೈನ್ಯ ಮತ್ತು ರಾಜ ಎಲ್ಲ ದುಷ್ಟರನ್ನು ವಧಿಸಿದ. ಇಂಥ ಇಂದ್ರಾದಿ ವಂದ್ಯ ಕೃಷ್ಣ ಬಂದಾ.

ದುಷ್ಟ ಕಂಸ, ಅವನ ಅನುಯಾಯಿ ದೈತ್ಯ ವರ್ಗ ಅಜ್ಞಾನದ ಸಂಕೇತ. ದೇವರದೇವ ಸುಜ್ಞಾನ ಮೂರುತಿ. ಅಜ್ಞಾನ ನಿವಾರಿಸಿ ಸುಜ್ಞಾನ ಪ್ರದಾಯಕ.

**ನಕ್ರಹರನು ಬಂದ ಚಕ್ರಧರನು ಬಂದ**
**ಅಕ್ರೂರಗೊಲಿದ ತ್ರಿವಿಕ್ರಮನು ಬಂದನೋ || 4 ||**

ನಕ್ರಹರನು ಬಂದ ಚಕ್ರಧರನು ಬಂದಾ = ಮೊಸಳೆಯ ಬಾಯಿಗೆ ಗಜೇಂದ್ರ ಸಿಕ್ಕಿದ್ದ ಭಕ್ತ ಕರಿವರ ಭಕ್ತಿಲಿ ಮೊರೆ ಇಟ್ಟ. ಭಕ್ತ ವತ್ಸಲ ಸತಿಗೂ ಹೇಳದೆ ಅತಿ ಅವಸರದಿ ಬಂದ. ಚಕ್ರದಿ ನಕ್ರನ ತರೆದ. ಭಕ್ತನ ಪೊರೆದ.

ಭಕ್ತಿಯ ಕೂಗು ಸಾಕು ಸರ್ವೋತ್ತಮನ ಕರೆತರಲು.

ನಕ್ರ ಸಂಸಾರಚಕ್ರದ ಸಂಕೇತ. ಸಿಕ್ಕಿಬಿದ್ದವ ಜೀವ. ಚಕ್ರಪಾಣಿಯ ಚಕ್ರ ನಕ್ರನ ತರೆಯ ಬೇಕು. ಸಂಸಾರ ಚಕ್ರ ಭಗ್ನ. ಭಕ್ತನಿಗೆ ಪರಮ ಪುರುಷಾರ್ಥ.

**ಇಂಥ ಮೋಕ್ಷದಾಯಕ ವಾಸುದೇವ ಬಂದಾನೋ**
**ಅಕ್ರೂರಗೊಲಿದ ತ್ರಿವಿಕ್ರಮನು ಬಂದಾನೋ |**

ಅಕ್ರೂರ ಭಕ್ತ ಶ್ರೇಷ್ಠ. ಜ್ಞಾನಿ. ಅವನಿಗೆ ಒಲಿದವ ಕೃಷ್ಣ. ತಥ್ಯ

ಜ್ಞಾನ ಭಕ್ತಿಗೆ ಒಲಿಯುವವ ಬಂದಾ. ತ್ರಿವಿಕ್ರಮ ಬಂದಾ -

ಬ್ರಹ್ಮಾಂಡ ವ್ಯಾಪ್ತ ರೂಪ ತ್ರಿವಿಕ್ರಮ. ಒಂದು ಹೆಜ್ಜೆ ಧರೆ. ಇನ್ನೊಂದು ಅಂತರಿಕ್ಷ. ತುಂಬಿ ಹೋಗಿದೆ.

ಬರಲು ಹೆಜ್ಜೆ ಎಲ್ಲಿಡುವ ತ್ರಿವಿಕ್ರಮ?

ಅದು ಆತನ ಅಚಿಂತ್ಯಾದ್ಭುತ ಶಕ್ತಿ ಎನ್ನುತ್ತಾರೆ ದಾಸರು.

ಅವರ ಜ್ಞಾನ ಭಕ್ತಿಗೆ ಮೆಚ್ಚಿ ತನ್ನ ಅರಮನೆಯಿಂದ ನೇರ ದಾಸರ ಹೃದಯ ಮಂಟಪಕ್ಕೆ ಬಂದಾನೋ.

**ಪಕ್ಷಿವಾಹನ ಬಂದ ಲಕ್ಷ್ಮೀ ರಮಣ ಬಂದಾ**
**ಅಕ್ಷಯ ಫಲದ ಲಕ್ಷ್ಮಣಾಗ್ರಜ ಬಂದ || 5 ||**

ಗರುಡ ವಾಹನ ಬಂದಾ. ಅರ್ಥ ಕಾಲ ನಾಮಕ, ನಿಯಾಮಕ ವಿಷ್ಣು ಬಂದಾ.

ಲಕ್ಷ್ಮೀ - ಸಕಲ ಜಗದ ಸಂಪದದ ಒಡೆಯಳು. ಅವಳ ಒಡೆಯ ವಿಷ್ಣು. ಲಕ್ಷ್ಮೀ ಸಕಲ ಶಾಸ್ತ್ರಾಭಿಮಾನಿನಿ. ಸಕಲ ಜ್ಞಾನದ ಒಡೆಯಳು. ಅವಳ ಒಡೆಯ ಸರ್ವಜ್ಞ ಮೂರ್ತಿ. ಇಂಥ ಲಕ್ಷ್ಮೀ ರಮಣ ಬಂದಾ.

ಅಕ್ಷಯ ಫಲದ ಲಕ್ಷ್ಮಣಾಗ್ರಜ ಬಂದ || -

ಅಕ್ಷಯ ಫಲ ಕೊಟ್ಟವಾರು? ಪಡೆದವರಾರು?

ಈಶ ಶ್ರೀರಾಮ, ದಾಸ ಹನುಮಂತನಿಗೆ ಅಕ್ಷಯ ಅನುಗ್ರಹ ಮಾಡಿದ. ರಾಮ ದೂರ್ವಾಸ ಮುನಿಗಳಿಗೆ ಅಕ್ಷಯ ಭೋಜನ ಕೊಟ್ಟ. ಕೃಷ್ಣ ದ್ರೌಪದಿಗೆ ಅಕ್ಷಯ ವಸ್ತ್ರ ಕೊಟ್ಟ. ಕೃಷ್ಣ ಪಾಂಡವರಿಗೆ ಅಕ್ಷಯ ಪಾತ್ರೆ ಕೊಟ್ಟ. ಇಂಥ ವಿಷ್ಣು ಬಂದಾ.

ಲಕ್ಷ್ಮಣಾಗ್ರಜ ಬಂದಾ –

ಲಕ್ಷಣನ ಅಗ್ರಜ - ಶ್ರೀ ರಾಮ ಬಂದಾ. ಲಕ್ಷ್ಮಣ ಶೇಷಾವತಾರ. ಅವನೇ ದ್ವಾಪರದಲ್ಲಿ ಬಲರಾಮ. ಆ ರಾಮನೇ ಈ ಕೃಷ್ಣ. ಬಂದವನು ರಾಮನೂ ಹೌದು. ಕೃಷ್ಣನೂ ಹೌದು.

**ನಿಗಮಗೋಚರ ಬಂದ ನಿತ್ಯ ತೃಪ್ತನು ಬಂದ**
**ನಗೆಮುಖ ಪುರಂದರ ವಿಠಲ ಬಂದನೋ || 6 ||**

ನಿಗಮಗೋಚರ ಬಂದ = ನಿಗಮ ಗೋಚರ - ವೇದ ಶಾಸ್ತ್ರಗಳಿಂದ ತಿಳಿಯಲ್ಪಡುವವನು, ಸಕಲ ವೇದ ಪ್ರತಿಪಾದ್ಯನು - ನಾರಾಯಣ ಬಂದಾ.

ನಿಗಮ ಗೋಚರ - ಪ್ರಳಯಕಾಲದಲ್ಲಿ ತನ್ನ ಬುದ್ಧಿಸ್ಥವಾದ ವೇದಗಳನ್ನು ಸೃಷ್ಟಿಯ ಆದಿಯಲ್ಲಿ ಪ್ರಕಾಶಿಸುವವನು.

ಮತ್ತೆ ನಿಗಮಗಳನ್ನು ಅಸುರ ಕದ್ದೊಯ್ದಿದ್ದ. ಅಸುರನ ಸಂಹರಿಸಿ, ವೇದಗಳ ಮರಳಿ ತಂದು ಬ್ರಹ್ಮನಿಗೆ ಕೊಟ್ಟು ಜಗಕೆ ನಿಗಮಗೋಚರ ಮಾಡಿದ ಮತ್ಸ್ಯಾವತಾರದ ಪ್ರಭು ಬಂದಾನೋ.

ನಿತ್ಯ ತೃಪ್ತನು ಬಂದ - ನಗೆಮುಖ ಪುರಂದರ ವಿಠಲ ಬಂದನೋ

ಶಬರಿ ದತ್ತ ಕಿಂಚ ಬೋರೆಹಣ್ಣು. ಶ್ರೀ ರಾಮ ತಿಂದ. ತೃಪ್ತನಾದ ನಿತ್ಯ ತೃಪ್ತ. ಕುಚೇಲನ ಹಿಡಿ ಅವಲಕ್ಕಿ. ಕೃಷ್ಣ ತಿಂದ. ತೃಪ್ತನಾದ ನಿತ್ಯ ತೃಪ್ತ.

ಅದೇ ಕೃಷ್ಣ. ಅಕ್ಷಯ ಪಾತ್ರೆಯ ಲೇಶ ಶೇಷ ತಿಂದ. ತೃಪ್ತನಾದ ನಿತ್ಯ ತೃಪ್ತ.
ದುರ್ಯೋಧನನ ಭೂರಿ ಭೋಜನ ತಿರಸ್ಕರಿಸಿದ. ವಿದುರನ ಹಾಲಿನ ಔತಣ ಸ್ವೀಕರಿಸಿದ.
ತೃಪ್ತ ನಿತ್ಯ ತೃಪ್ತ.

ಉತ್ತರಣೆ ಬೀಜದ ತುತ್ತು ಅನ್ನ ಶುಕಮುನಿ ಕೊಟ್ಟ. ಶ್ರೀನಿವಾಸ ಉಂಡ. ಜಗದ ಜನ ತೃಪ್ತ. ನಿತ್ಯ ತೃಪ್ತ ಉಂಡದ್ದಕ್ಕಾಗಿ.

ಆತ ಪೂರ್ಣ. ಆದ್ದರಿಂದ ಆನಂದಮಯ. ಆದ್ದರಿಂದ ನಿತ್ಯ ತೃಪ್ತ. ಆದ್ದರಿಂದ ಸದಾ ನಗೆಮುಖ.

ಇಂಥ ನಗೆ ಮುಖದ ರುಕ್ಮಿಣೀಶ ವಿಠ್ಠಲ, ಪುರಂದರ ದಾಸರ ನವವಿಧ ಭಕ್ತಿಯ ನವರತ್ನಗಳ ಹೃದಯ ಮಂಟಪಕೆ ಬಂದಾನೋ.

ದಾಸರ ಅಂತರ್ಗತ ಮುಖ್ಯ ಪ್ರಾಣಾಂತರ್ಗತ

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ